**<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯದಲ್ಲಿ</u>**

ಸಿ.ಸಿ. **132/2019**

ಪಿ.ಡಬ್ಲ್ಯೂ-**7**

ಸಿ.ಡಬ್ಲ್ಯೂ-**26**

ಸಾಕ್ಷಿದಾರರ ಹೆಸರು ಃ ಅಮರನಾರಾಯಣ

ತಂದೆ ಹೆಸರು ಃ ಯಲ್ಲಪ್ಪ

ವಯಸ್ಸು ಃ **65** ವರ್ಷ

ಕೆಲಸ ಃ **Retired Dy.SP**

ವಾಸ ಸ್ಥಳ ಃ ಬೆಂಗಳೂರು

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ **04-05-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ದಿನಾಂಕಃ 02.08.2017 ರಿಂದ 17.09.2019 ರ ವರೆಗೆ CPI ಗೌರಿಬಿದನೂರು ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದೆ.

ದಿಃ 01.12.2018 ರಂದು ಈ ಪ್ರಕರಣದ ಕಡತವನ್ನು ಚಾಸಾ-25 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪಂಚರಾದ ಚಾಸಾ-12 ರಿಂದ 14 ಹಾಗೂ ಮೃತರ ವಾರಸುದಾರರನ್ನು ಬರಮಾಡಿಕೊಂಡು ಅವರ ಸಮಕ್ಷಮ, ಮೃತ ಆಂಜಿನಪ್ಪ ದೇಹವನ್ನು ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಗೆ ನಿಪಿ-11 ಅನ್ನು ತೋರಿಸಲಾಗಿ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**11** ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಮೃತರ ಸಂಬಂಧಿಕರಾದ ಚಾಸಾ-15 ರಿಂದ 18 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಶವ ಪರೀಕ್ಷೆ ನಡೆಸಿ ಮೃತರ ವಾರಸುದಾರರಿಗೆ ಶವವನ್ನು ಹಸ್ತಾಂತರ ಮಾಡಿರುತ್ತೇನೆ. ಅದೇ ದಿನ ಮೃತ ಕೃಷ್ಣಪ್ಪ ರವರ ಶವವನ್ನು ಪಂಚನಾಮೆ ಮಾಡಲು ಚಾಸಾ-25 ರವರನ್ನು ನೇಮಕ ಮಾಡಿರುತ್ತೇನೆ. ಚಾಸಾ-25 ರವರು ಶವ ಪಂಚನಾಮೆಯನ್ನು ಜರುಗಿಸಿ ವರದಿಯನ್ನು ನೀಡಿರುತ್ತಾರೆ. ನಂತರ ಕೃತ ನಡೆದ ಸ್ಥಳಕ್ಕೆ ಭೇಟಿ ಕೇಸಿನ ಪಿರ್ಯಾದುದಾರರು ಸ್ಥಳದಲ್ಲಿ ಹಾಜರಿದ್ದು, ಕೃತ ನಡೆದ ಸ್ಥಳವನ್ನು ತೋರಿಸಲಾಗಿ ಸ್ಥಳಕ್ಕೆ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬರೆದಿರುತ್ತೇನೆ. ಸ್ಥಳದಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ RJ-32-JC-1224 Santro Lorry ಹಾಗೂ KA-40-7422 ದ್ವಿ ಚಕ್ರ ವಾನವನ್ನು ಅಮಾನತ್ತು

ಪಡಿಸಿಕೊಂಡು ಠಾಣಾ ಮಾಲು ಪಟ್ಟಿಯಲ್ಲಿ ಸೇರಿಸಿರುತ್ತೇನೆ. ಸ್ಥಳದಲ್ಲಿ ಕಚ್ಚ ನಕ್ಷೆಯನ್ನು ತಯಾರು ಮಾಡಿ ಭಾವಚಿತ್ರಗಳನ್ನು ತೆಗೆಯಿಸಿರುತ್ತೇನೆ. ಸಾಕ್ಷಿಗೆ ಕಚ್ಚ ನಕ್ಷೆಯನ್ನು ತೋರಿಸಲಾಗಿ, ಅದನ್ನು ನಿಪಿ-**19** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**19** ಎ ಎಂದು ಗುರುತಿಸಲಾಯಿತು. ಮಾಲು ಪಟ್ಟಿಯನ್ನು ತೋರಿಸಲಾಗಿ, ಅದನ್ನು ನಿಪಿ-**20** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**20** ಎ ಎಂದು ಗುರುತಿಸಲಾಯಿತು.

ದಿಃ 03.12.20218 ರಂದು ಈ ಪ್ರಕರಣದ ಆರೋಪಿಯನ್ನು ಸ್ವ-ಇಚ್ಛೆಯಿಂದ ನನ್ನ ಮುಂದೆ ಹಾಜರಾಗಿದ್ದು, ಆತನನ್ನು ವಿಚಾರಿಸಿ, ಆತನ ಸ್ವ-ಇಚ್ಛೆ ಹೇಳಿಕೆಯನ್ನು ಪಡೆದುಕೊಂಡು ದಸ್ತಗಿರಿ ಕ್ರಮ ಜರುಗಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ವಾಹನದ ಮಾಲೀಕರಾದ ಚಾಸಾ-19 ರವರಿಗೆ ಚಾಸಾ-14 ರಂತೆ ನೋಟಿಸನ್ನು ಜಾರಿ ಮಾಡಿ ನನ್ನ ಮುಂದೆ ಹಾಜರಾಗಿ, ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ವಾಹನದ ದಾಖಲಾತಿಗಳನ್ನು ಪರಿಶೀಲಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ನಿಪಿ-16 ರಂತೆ ವಾಹನವನ್ನು ಅವರ ವಶಕ್ಕೆ ಬಿಟ್ಟಿರುತ್ತೇನೆ. ಸಾಕ್ಷಿಗೆ ನಿಪಿ-16 ನ್ನು ತೋರಿಸಲಾಗಿ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**16** ಸಿ ಎಂದು ಗುರುತಿಸಲಾಯಿತು.

ದಿಃ 06.12.2018 ರಂದು ಮೇಲೆ ಹೇಳಿರುವ ದ್ವಿ ಚಕ್ರವಾಹನವನ್ನು ಮೃತ ಆಂಜಿನಪ್ಪ ರವರ ಮಗ ಪ್ರಶಾಂತ್ ; ಚಾಸಾ-8 ರವರಿಗೆ Indemnity Bond ಮುಖಾಂತರ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-21 ನ್ನು ತೋರಿಸಲಾಗಿ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**21** ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-20 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 28.12.2018 ರಂದು ಮೃತ ಕೃಷ್ಣಪ್ಪ ಹಾಗೂ ಆಂಜಿನಪ್ಪ ರವರ PM ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-21 ರವರಿಗಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ IMV report ಅನ್ನು ತೋರಿಸಲಾಗಿ, ಅದನ್ನು ನಿಪಿ-**22** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**22** ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ಹಾಗೂ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಶ್ರೀ . ಕೆ.ಎಸ್.ಆರ್. ಆರೋಪಿತರ ವಕೀಲರಿಂದಃ

ಅಪಘಾತ ನಡೆದ ದಿನ ಸ್ಥಳಕ್ಕೆ ಹೋಗಿದೆ ಎಂದರೆ ಸರಿ. ಚಿಕ್ಕಕುರುಗೋಡಿನಲ್ಲಿ ಎರಡು ರಸ್ತೆ ಇದೆ ಎಂದರೆ ನೆನಪಿಲ್ಲ. ಒಂದೇ ರಸ್ತೆ ಬಳಕೆಯಲ್ಲಿ ಇದೆ ಮತ್ತು ಅದರಲ್ಲಿ ಅಂಗಡಿಗಳು ಇವೆ ಮತ್ತು humps ಇವೆ ಎಂದರೆ ಘಟನಾ ಸ್ಥಳದಿಂದ ಸುಮಾರು 50-60 ಅಡಿ ದೂರ ಇದೆ ಎಂದು ನುಡಿಯುತಾರೆ. Humps ಇದ್ದ ಕಾರಣ ವಾಹನಗಳು ನಿಧಾನವಾಗಿ ಚಾಲನೆ ಮಾಡುತ್ತವೆ ಎಂದರೆ ಸಾಕ್ಷಿಯು ಘಟನಾ ಸ್ಥಳದಿಂದ ಸ್ವಲ್ಪ ದೂರಲ್ಲಿ humps ಇವೆ ಎಂದು ನುಡಿಯುತ್ತಾರೆ. ಗೌರಿಬಿದನೂರಿನಿಂದ ಚಿಕ್ಕಕುರುಗೋಡು ಗೇಟಿಗೆ ಹೋಗುವ ರಸ್ತೆಯ ಬಳಿ humps ಇದ್ದು, ವಾಹನಗಳು ಸದರಿ humps ಅನ್ನು ದಾಟಿಕೊಂಡು ಬರಬೇಕು ಎಂದರೆ, ಸಾಕ್ಷಿ ನಾನು ಗಮನಿಸಿಲ್ಲವೆಂದು ನುಡಿಯುತ್ತಾರೆ.

ಮೃತ ಕೃಷ್ಣಪ್ಪನಿಗೆ ವಾಹನ ಚಾಲನೆ ಮಾಡಲು ಪರವಾನಿಗೆ ಇತ್ತಾ ಎಂದು ತನಿಖೆಯಲ್ಲಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ವಿಚಾರಿಸಿದ್ದು, ಮಾಹಿತಿ ಲಭ್ಯವಿಲ್ಲವೆಂದು ನುಡಿಯುತ್ತಾರೆ. Container ರಸ್ತೆಯಲ್ಲಿ ನೇರವಾಗಿ ಬರುತ್ತಿದ್ದು, ದ್ವಿ ಚಕ್ರ ವಾಹನದಲ್ಲಿ ಇದ್ದ ವ್ಯಕ್ತಿಗಳು humps ಅನ್ನು ದಾಟಲು ಅವರೇ ಬಿದ್ದು ಮೃತರಾದರು ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಪರಿಹಾರ ಕೊಡಿಸಲು ಸುಳ್ಳು ಕಚ್ಚ ನಕ್ಷೆಯನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನಡೆಯಿತು ಎಂದು ಹೇಳಲಾದ ದಿನ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ, ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲವೆಂದರೆ ಸರಿಯಲ್ಲ. ದ್ವಿ ಚಕ್ರ ವಾಹನವನ್ನು ಮಾಲೀಕರಿಗೆ ನೀಡಿಲ್ಲವೆಂದರೆ ಸಾಕ್ಷಿ ಮಾಲೀಕ ಮೃತ ಹೊಂದಿದ ಕಾರಣ ಅವರ ವಾರಸುದಾರರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ ತನಿಖೆಯನ್ನು ನಡೆಸಿಲ್ಲವೆಂದರೆ ಸರಿಯಲ್ಲ. ನಿಪಿ-2 ಅನ್ನು ಠಾಣೆಯಲ್ಲಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು